





ಚಿಪ್ಕೋ ಚಳವಳಿ: ಮರಗಳಿಗೆ ಮಾತೃತ್ವದ ಅಪ್ಪುಗೆ

# ಹೋರಾಟದ ಹೆದ್ದಾರಿಯಲ್ಲಿ ಮಾತೃತ್ವದ ಕೆಂಡಸಂಪಿಗೆ

ಮಹಿಳೆಯರು ಪಾಲ್ಗೊಂಡು, ಮಹಿಳೆಯರೇ ರೂಪಿಸಿದ ಕೆಲವು ಚಳವಳಿಗಳ ಕುರಿತ ಟಿಪ್ಪಣಿಗಳು ಇಲ್ಲಿವೆ. ಈ ಚಾರಿತ್ರಿಕ ಸಂಗತಿಗಳು ಮಹಿಳೆಯರನ್ನು ಸಮಾಜ ಕೃತಜ್ಞತೆಯಿಂದ ನೋಡಲಿಕ್ಕೆ ಹಾಗೂ ಹೊಸ ಪೀಳಿಗೆಗೆ ಪ್ರೇರಣೆ ಒದಗಿಸಲು ಪೂರಕವಾಗಿವೆ.

■ ರಶ್ಮಿ ಕೆ.

ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸಿ ದೆಹಲಿಯ ಶಾಹೀನ್‌ಬಾಗ್‌ನಲ್ಲಿ 2019ರ ಡಿಸೆಂಬರ್ 11ರಂದು ಆರಂಭವಾದ ಪ್ರತಿಭಟನೆ ದೇಶದ ಗಮನಸೆಳೆದುದಕ್ಕೆ ಪ್ರಮುಖ ಕಾರಣ, ಆ ಹೋರಾಟದಲ್ಲಿ ಭಾಗಿಯಾದ ಮಹಿಳೆಯರು. ಚಳಿ, ಗಾಳಿ, ಬಿಸಿಲನ್ನು ಲೆಕ್ಕಿಸದೆ ಮಹಿಳೆಯರು ಶಾಂತಿಯುತವಾಗಿ ರೂಪಿಸಿದ ಪ್ರತಿಭಟನೆಯದು. ಇತ್ತೀಚೆಗೆ ದೇಶ ಕಂಡ ಅತೀ ದೊಡ್ಡ ಪ್ರತಿಭಟನೆ ಇದಾಗಿದೆ. ದೆಹಲಿ ಮಾತ್ರವಲ್ಲ, ದೇಶದ ವಿವಿಧ ರಾಜ್ಯಗಳಲ್ಲಿ ಸಿಎಎ, ಎನ್‌ಆರ್‌ಸಿ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಿರುವುದು ವಿಶೇಷ.

ಮಹಿಳೆಯರು ಪ್ರತಿಭಟನೆ ನಡೆಸುವುದು, ಹೋರಾಟದ ನೇತೃತ್ವ ವಹಿಸುವುದು ಇದೇ ಮೊದಲೇನೂ ಅಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ತಮ್ಮ ಹಕ್ಕುಗಳಿಗಾಗಿ, ನ್ಯಾಯಕ್ಕಾಗಿ ಹೋರಾಟ ನಡೆಸಿ ಅದನ್ನು ಪಡೆದುಕೊಂಡವರು ಮಹಿಳೆಯರು. ಈ ಹೋರಾಟಗಳು ಬರೀ ಮಹಿಳೆಯರ ವಿಷಯಗಳಿಗೆ ಸಂಬಂಧಿಸಿದ್ದಲ್ಲ, ಅದು ಜೀವಪರವಾಗಿತ್ತು. ಪ್ರಕೃತಿ ಮತ್ತು ಸಮಾಜದಲ್ಲಿ ದಮನಿತರಾದಾಗ ಅಥವಾ ದಮನಿಸುವ ಶಕ್ತಿ ಮೇಲುಗೈ ಸಾಧಿಸಿದಾಗ ಅಲ್ಲಿ ಮಹಿಳೆ ಎದ್ದು ನಿಲ್ಲುತ್ತಾಳೆ. ಅಲ್ಲಿಯವರಿಗೆ ಮೌನವಾಗಿದ್ದ ಆಕೆ ದನಿಯೆತ್ತುತ್ತಾಳೆ. ಹೀಗೆ ನಡೆದ ಹೋರಾಟಗಳಲ್ಲಿ ಆಕೆ ಯಶಸ್ಸು ಸಾಧಿಸುತ್ತಾಳೆ. ಕೆಲವೊಂದು ಹೋರಾಟಗಳು ನಿರಂತರವಾಗಿದ್ದರೂ ಛಲ ಬಿಡದೆ ಆಕೆ ಹೋರಾಡುತ್ತಾಳೆ, ಹೋರಾಡುತ್ತಲೇ ಇರುತ್ತಾಳೆ. ಆಕೆ ಎದೆಯಲ್ಲಿ ಹೋರಾಟದ ಕಿಡಿಯೊಂದು ಹೊತ್ತಿಕೊಂಡರೆ ಸಾಕು ಅದು ಬೆಂಕಿಯಾಗಿ ಹಬ್ಬುತ್ತದೆ ಎಂಬುದಕ್ಕೆ ನಮ್ಮ ಇತಿಹಾಸಗಳೇ ಸಾಕ್ಷಿ ಹೇಳುತ್ತವೆ. ಅಂಥ ಕೆಲವು ಚಾರಿತ್ರಿಕ ನೆನಪುಗಳು ಇಲ್ಲಿವೆ.

## ಚಿಪ್ಕೊ ಚಳವಳಿ

ಈ ಮಣ್ಣು ನಮ್ಮದು
ಈ ನೀರು ಕೂಡಾ ನಮ್ಮದೇ
ಈ ಕಾಡು ನಮ್ಮದೇ
ನಮ್ಮ ಹಿರೀಕರು ಇದನ್ನು ಬೆಳೆಸಿದ್ದು
ನಾವು ಇದನ್ನು ರಕ್ಷಿಸುತ್ತೇವೆ

ಮೇಲಿನ ಘೋಷಣೆಯೊಂದಿಗೆ ಉತ್ತರಾಖಂಡದ ಜನರು ಆರಂಭಿಸಿದ್ದು 'ಚಿಪ್ಕೊ ಚಳವಳಿ' (ಅಪ್ಪಿಕೋ ಚಳವಳಿ). 1973ರಲ್ಲಿ ಹಿಮಾಲಯನ್ ಅರಣ್ಯದಲ್ಲಿರುವ ಮರಗಳನ್ನು ಉಳಿಸುವುದಕ್ಕಾಗಿ